


# ಆನೆ ಬೆನ್ನೇರಿದ ಅಕ್ಷರ!

**ಕನ್ನಡದ ಶೀರ್ಷಿಕೆಗಳಿಗೆ ಹೊಸ ರೂಪು ನೀಡುವ ಉದ್ದೇಶದಿಂದ 'ಬಂಡೀಪುರ' ಫಾಂಟ್ ರೂಪುಗೊಂಡಿದೆ. ಆನೆಯ ದಂತ ಹಾಗೂ ಸೊಂಡಿಲು ಹೊಸ ಫಾಂಟ್‌ಗೆ ಪ್ರೇರಣೆ.**

**■ ಶಶಿಕುಮಾರ್ ಸಿ.**

ಬಂಡೀಪುರ – ಇದು ಆನೆಗಳ ತಾಣವಷ್ಟೇ ಅಲ್ಲ, ಕನ್ನಡ ಫಾಂಟ್ ಹೆಸರೂ ಹೌದು!

ಮೈಸೂರಿನ 'ಅರೇನಾ ಆ್ಯನಿಮೇಷನ್'ನ ಶೈಕ್ಷಣಿಕ ಮುಖ್ಯಸ್ಥರಾದ ಮಂಜುನಾಥ ಆರ್. 'ಬಂಡೀಪುರ' ಹೆಸರಿನ ವಿಶೇಷ ಫಾಂಟ್ ಜನಕರು. ಆನೆಯ ದಂತ ಹಾಗೂ ಸೊಂಡಿಲನ್ನು ಹೋಲುವ ಈ ಫಾಂಟ್ ಶೀರ್ಷಿಕೆಗಳಿಗೆ ಹೇಳಿಮಾಡಿಸಿದಂತಿದೆ. ದೊಡ್ಡ ಗಾತ್ರದ ಅಕ್ಷರಗಳಲ್ಲಿ ಆಕರ್ಷಕವಾಗಿ ಕಾಣುತ್ತದೆ.

ಟಿ. ನರಸೀಪುರದ ಮಂಜುನಾಥ ಅವರು ಅರೇನಾ ಆ್ಯನಿಮೇಷನ್ ಶೈಕ್ಷಣಿಕ ಕೇಂದ್ರದಲ್ಲಿ ಗ್ರಾಫಿಕ್ ಡಿಸೈನ್, ಫೋಟೊಗ್ರಫಿ ಹಾಗೂ ವಿಎಫ್‌ಎಕ್ಸ್ ತರಗತಿಯನ್ನು ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದಾರೆ. ಫಾಂಟ್ ರಚನಾ ಕ್ಷೇತ್ರ ಅವರ ಸಾಹಸದ ಹೊಸ ಬಯಲು. ಮೊದಲ ಪ್ರಯತ್ನದಲ್ಲೇ ಎಲ್ಲರ ಗಮನ ಸೆಳೆದು ಮೆಚ್ಚುಗೆ ಪಡೆದಿದ್ದಾರೆ.

ಹನ್ನೆರಡು ವರ್ಷಗಳಿಂದ ಶಿಕ್ಷಕರಾಗಿ ಕೆಲಸ ಮಾಡುತ್ತಿರುವ ಅವರು, ಅದಕ್ಕೂ ಮುನ್ನ ಬ್ಯಾನರ್‌ಗಳು ಹಾಗೂ ಬೋರ್ಡ್‌ಗಳನ್ನು ಬರೆಯುವ ಕೆಲಸ ಮಾಡುತ್ತಿದ್ದರು. ಚಿಕ್ಕಂದಿನಿಂದಲೇ ಕನ್ನಡದ ಅಕ್ಷರಗಳನ್ನು ವಿಶೇಷವಾಗಿ ಸ್ಕೆಚ್ ಮಾಡುವುದರಲ್ಲಿ ಆಸಕ್ತಿಯಿತ್ತು. ವಾಲ್ ಪೇಂಟಿಂಗ್, ಮಾರ್ಡನ್ ಆರ್ಟ್ ಅನ್ನೂ ಕರಗತಗೊಳಿಸಿಕೊಂಡಿರುವ ಅವರು ಕಲಾವಿದನಾಗಿಯೂ ಗುರ್ತಿಸಿಕೊಂಡಿದ್ದಾರೆ.

ಡಿಜಿಟಲ್ ಪ್ರಿಂಟಿಂಗ್ ಬಂದಮೇಲೆ ಬೋರ್ಡ್ ಹಾಗೂ ಬ್ಯಾನರ್‌ಗಳ ಮೇಲೆ ಕೈಯಲ್ಲಿ ಅಕ್ಷರಗಳನ್ನು ಬರೆಯುವ ಕಾರ್ಯವು ತೆರೆಮರೆಗೆ ಸರಿದು ಕಂಪ್ಯೂಟರ್‌ನಲ್ಲೇ ಎಲ್ಲವನ್ನೂ ಮಾಡುವ ಕೆಲಸ ಮುನ್ನೆಲೆಗೆ ಬಂತಷ್ಟೇ. ಆ ಕೆಲಸವನ್ನೂ ಕೌಶಲವನ್ನೂ ರೂಢಿಸಿಕೊಂಡ ಮಂಜುನಾಥ್, 'ಇದ್ದ ಕನ್ನಡದ ಕೆಲವೇ ಫಾಂಟ್‌ಗಳಿಗೆ ಕೆಲವೊಂದು ಬದಲಾವಣೆ ತಂದು ಡಿಸೈನ್ ಮಾಡುತ್ತಿದ್ದೆ. ವಿವಿಧ ಶೈಲಿಯ ಇನ್ನಷ್ಟು ಆಕರ್ಷಕ ಫಾಂಟ್‌ಗಳ ಕೊರತೆ ಎದ್ದು ಕಾಣುತ್ತಿತ್ತು. ಅದನ್ನು ನೀಗಿಸುವ ಇಚ್ಛೆಯಿತ್ತು. ಅದರ ಮುಂದುವರೆದ ಭಾಗವೇ ಈ ಫಾಂಟ್' ಎನ್ನುತ್ತಾರೆ.

'ಕೊರೊನಾದಿಂದ ಮೊದಲ ಬಾರಿ ಲಾಕ್‌ಡೌನ್ ಶುರುವಾದಾಗ ಸುಮ್ಮನೆ ಕೂರುವ ಬದಲು ಬಹುದಿನಗಳ ಕನಸಾಗಿದ್ದ ಫಾಂಟ್ ರಚನಾ ಕಾರ್ಯಕ್ಕೆ ಕೈ ಹಾಕಿದೆ. ಸತತ ಒಂದು ವರ್ಷದ ಪರಿಶ್ರಮದಿಂದಾಗಿ ಈ ಫಾಂಟ್ ಹೊರತಂದಿದ್ದೇನೆ. ಇದು ಕನ್ನಡಕ್ಕೆ ನನ್ನ ಕೊಡುಗೆ. ಈ ಫಾಂಟ್ ಹೆಚ್ಚು ಬಳಕೆಯಾದರೆ ಇನ್ನಷ್ಟು ಆಕರ್ಷಕ ಫಾಂಟ್‌ಗಳನ್ನು ಹೊರತರಲು ಪ್ರೇರಣೆ ಸಿಕ್ಕಂತಾಗುತ್ತದೆ' ಎನ್ನುತ್ತಾರೆ.

## ಫಾಂಟ್ ರಚನೆ ಹೇಗೆ?

ಫಾಂಟ್ ರಚನೆಗೆ ಡಿಜಿಟಲ್ ಫಾಂಟ್ ರಚನೆಯ ಯಾವುದಾದರೂ ಒಂದು ಸಾಫ್ಟ್‌ವೇರ್ ಅಗತ್ಯ. ಬಂಡೀಪುರ ಫಾಂಟ್‌ಗೆ ಮಂಜುನಾಥ್ ಅವರು ಬಳಸಿದ್ದು ಗ್ಲಿಪ್ಸ್ (glyphs) ಎಂಬ ಸಾಫ್ಟ್‌ವೇರ್. ಅದು ಕೇವಲ ಆ್ಯಪಲ್‌ನ ಮ್ಯಾಕ್‌ನಲ್ಲಿ ಮಾತ್ರ ವರ್ಕ್ ಆಗುವಂತಹದ್ದು. ವಿಂಡೋಸ್ ಬಳಕೆದಾರರಿಗೆ ಬೇರೆ ಬೇರೆ ಸಾಫ್ಟ್‌ವೇರ್‌ಗಳು ಲಭ್ಯವಿವೆ.

ಮಂಜುನಾಥ್ ಶೀರ್ಷಿಕೆಯನ್ನು ಕೇಂದ್ರವಾಗಿಟ್ಟುಕೊಂಡು ಬಂಡೀಪುರ ಫಾಂಟ್ ರಚಿಸಿದ್ದಾರೆ. ಫಾಂಟ್‌ನ ಸ್ಕೆಚ್ ಅನ್ನು ಮೊದಲು ಸಿದ್ಧಪಡಿಸಿಕೊಂಡ ನಂತರ, ಡಿಜಿಟಲ್ ಹಾಗೂ ಪ್ರೋಗ್ರಾಮಿಂಗ್ ಮೂಲಕ ಸ್ಕೆಚ್‌ನ ರೀತಿಯೇ ಫಾಂಟ್ ರಚಿಸಿದ್ದಾರೆ.

ಫಾಂಟ್ ಹಾಗೂ ಫಾಂಟ್ ಟೆಕ್ನಾಲಜಿ ಬಗ್ಗೆ ಜ್ಞಾನವುಳ್ಳ ಯಾರು ಬೇಕಾದರೂ ವಿವಿಧ ರೀತಿಯ ಫಾಂಟ್‌ಗಳನ್ನು ಸೃಷ್ಟಿಸಬಹುದು. ಫಾಂಟ್‌ನ ಗಾತ್ರ, ವಿನ್ಯಾಸ ಹೇಗಿರಬೇಕು ಎಂಬ ಕನಿಷ್ಠ ಜ್ಞಾನವಿದ್ದರೆ ಸಾಕು. ಅದೆಲ್ಲಕ್ಕಿಂತ ಮಿಗಿಲಾಗಿ ಪೈಥಾನ್ ಸ್ಕ್ರಿಪ್ಟಿಂಗ್ ಬಗ್ಗೆ ಅರಿವಿರಬೇಕು ಎಂಬುದು ಮಂಜುನಾಥ ವಿವರಣೆ.

ಇಂಗ್ಲಿಷ್ ಸೇರಿದಂತೆ 134 ಭಾಷೆಗಳಲ್ಲಿ ಬಂಡೀಪುರ ಫಾಂಟ್ ಲಭ್ಯ. ನಮ್ಮ ದೇಶದ ಭಾಷೆಗಳ ಪೈಕಿ ಕನ್ನಡ ಭಾಷೆಗೆ ಮಾತ್ರ ಇದು ಸ್ಪಂದಿಸುತ್ತದೆ. ಈ ಫಾಂಟ್‌ನ ಜೊತೆಗೆ ಇನ್ನೂ ಹೆಚ್ಚು ಫಾಂಟ್‌ಗಳನ್ನು ಕನ್ನಡ ಲಿಪಿಯಲ್ಲಿ ರಚಿಸುವ ಉದ್ದೇಶವನ್ನು ಹೊಂದಿರುವ ಅವರು ಆ ನಿಟ್ಟಿನಲ್ಲಿ ಕಾರ್ಯನಿರತರಾಗಿದ್ದಾರೆ. ಸಾಂಸ್ಕೃತಿಕ ನಗರವನ್ನೇ ಕಲ್ಪನೆಯನ್ನಾಗಿಟ್ಟುಕೊಂಡು ಮೈಸೂರು ಹೆಸರಿನಲ್ಲಿ ಫಾಂಟ್ ರಚಿಸುವ ಉದ್ದೇಶವೂ ಅವರಿಗಿದೆ.

ಬಂಡೀಪುರ ಫಾಂಟ್ ಯುನಿಕೋಡ್ ಆಗಿದ್ದು, ಕಂಪ್ಯೂಟರ್‌ಗಳಲ್ಲಿ ಬಳಕೆಗೆ ಲಭ್ಯವಿದೆ. ಫಾಂಟ್ ಅನ್ನು ಇನ್‌ಸ್ಟಾಲ್ ಮಾಡಿಕೊಂಡು ಎಲ್ಲಿ ಬೇಕಾದರೂ ಇದನ್ನು ಬಳಸಬಹುದು.

## ಆನೆಯೇ ಪ್ರೇರಣೆ

ಫಾಂಟ್ ರಚನೆಗೆ ಮಂಜುನಾಥ ಮೊದಲು ಸ್ಕೆಚ್ ಮಾಡಿಕೊಂಡ ಪದ ಆನೆ. ಆನೆ ಅಕ್ಷರವನ್ನು ನಾಲ್ಕೈದು ರೀತಿ ಸ್ಕೆಚ್ ಮಾಡಿಕೊಂಡಿದ್ದ ಅವರಿಗೆ ಆನೆಯ ಸೊಂಡಿಲು ಹಾಗೂ ದಂತವನ್ನು ಹೋಲುವಂತಹ ಫಾಂಟ್ ಆಕರ್ಷಕವಾಗಿ ಕಂಡಿತಂತೆ. ಹೀಗಾಗಿ, ಅದೇ ಸ್ಕೆಚ್ ಅನ್ನು ಮಾದರಿಯಾಗಿಟ್ಟುಕೊಂಡು ಕನ್ನಡದ ಎಲ್ಲ ಅಕ್ಷರಗಳನ್ನು ಸ್ಕೆಚ್ ಮಾಡಿದ ಅವರು ನಂತರ ಅದನ್ನು ಸಾಫ್ಟ್‌ವೇರ್ ಮೂಲಕ ಫಾಂಟ್ ಆಗಿ ಅಳವಡಿಸಿದ್ದಾರೆ.

'ಆನೆಯಂತೆಯೇ ಫಾಂಟ್ ಇದ್ದ ಕಾರಣಕ್ಕೆ ಪ್ರಾರಂಭದಲ್ಲಿ ಅದಕ್ಕೆ 'ಎಲಿಫ್ಯಾಂಟ್ ಫಾಂಟ್' ಎಂದು ಹೆಸರಿಡಲು ಮುಂದಾದೆ. ಉಚ್ಚಾರಣೆಗೆ ಅದು ತೊಡಕಾಗಿತ್ತು. ಆನೆಗಳಿಗೆ ರಾಜ್ಯದಲ್ಲಿ ಬಂಡೀಪುರ ಫೇಮಸ್ ಆಗಿದ್ದರಿಂದ ಅದೇ ಹೆಸರನ್ನು ಆಯ್ಕೆ ಮಾಡಿದೆ' ಎಂದು ವಿವರಿಸುತ್ತಾರೆ.

## ಉಚಿತ ಏಕೆ?

'ಫೇಯ್ಡ್ ಫಾಂಟ್ ಎಂದರೆ ಅಷ್ಟಾಗಿ ಯಾರೂ ಅದನ್ನು ಬಳಸಲು ಮುಂದಾಗುವುದಿಲ್ಲ. ಯಾರೆಲ್ಲ ಈ ಫಾಂಟ್ ಬಳಸುತ್ತಿದ್ದಾರೆ ಎಂಬುದನ್ನು ಟ್ರ್ಯಾಕ್ ಮಾಡಲು ಸಾಧ್ಯವಿಲ್ಲ. ಅದಕ್ಕಿಂತ ಮಿಗಿಲಾಗಿ ನನ್ನ ಫಾಂಟ್ ಅನ್ನು ಹೆಚ್ಚು ಜನ ಬಳಸುವಂತಾಗಬೇಕು. ಈ ಎಲ್ಲ ಕಾರಣಗಳಿಂದ ಫಾಂಟ್ ಅನ್ನು ವೈಯಕ್ತಿಕ ಹಾಗೂ ವಾಣಿಜ್ಯ ಉದ್ದೇಶಕ್ಕೆ ಬಳಸಲು ಉಚಿತವಾಗಿ ಅವಕಾಶ ಕಲ್ಪಿಸಲಾಗಿದೆ' ಎನ್ನುವುದು ಮಂಜುನಾಥ್ ಮನದ ಮಾತು.

'ಅಕ್ಷರ ಟೈಪ್ ಸ್ಟುಡಿಯೊ' (aksharatypestudio.in) ವೆಬ್‌ಸೈಟ್‌ನಿಂದ 'ಬಂಡೀಪುರ' ಫಾಂಟ್ ಅನ್ನು ಬಿಡುಗಡೆ ಮಾಡಿದ್ದು, ಡೌನ್‌ಲೋಡ್‌ಗೂ ಅಲ್ಲೇ ಅವಕಾಶವನ್ನು ಕಲ್ಪಿಸಲಾಗಿದೆ. ■